**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1672/2022**

| | | | |
|---|---|---|---|
| **ಹೆಸರು** | **:** | **ಮಲ್ಲಿಕಾರ್ಜುನ** | ಚಾ.ಸಾ. 6 |
| **ತಂದೆಯ ಹೆಸರು** | **:** | **ಶ್ಯಾಮರಾವ** | ಪ್ರಾ.ಸಾ. 1 |
| **ವಯಸ್ಸು** | **:** | **39 ವರ್ಷ** | ದಿನಾಂಕಃ 10-10-2025 |
| **ಉದ್ಯೋಗ** | **:** | **ವ್ಯವಸಾಯ** | |
| **ವಾಸಸ್ಥಳ** | **:** | **ಅಣವಾರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-7 ಮತ್ತು 19 ರವರು ನನಗೆ ಗೊತ್ತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು, ಚಾಸಾ-7, 19 ಹಾಗೂ ಪೋಲಿಸರು ಇದ್ದೇವೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಇನ್ನೊಂದು ಭಾವಚಿತ್ರದಲ್ಲಿ ಸಹ ನಾನು, ಚಾಸಾ-7, 19 ಹಾಗೂ ಪೋಲಿಸರು ಇದ್ದೇವೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.

ಈಗ 3 ವರ್ಷಗಳ ಹಿಂದೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ ಮಧ್ಯಾಹ್ನ 12 ಗಂಟೆ ಸುಮಾರಿಗೆ ಒಂದು ಲಾರಿ ಹಾಗೂ ಒಂದು ದ್ವಿಚಕ್ರ ವಾಹನದ ಮುಂದೆ ನಿಲ್ಲಿಸಿ ಭಾವಚಿತ್ರವನ್ನು ಪಡೆದಿರುತ್ತಾರೆ. ಸದರಿ ವಾಹನಗಳ ಮಧ್ಯ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಾನು ನೋಡಿದಾಗ ಸದರಿ ವಾಹನಗಳು ಪೋಲಿಸ ಠಾಣೆಯಲ್ಲಿದ್ದವು. ವಾಹನಗಳನ್ನು ಬಿಡುತ್ತೇವೆ ಎಂದು ಹೇಳಿ ಪೋಲಿಸರು ನನ್ನ ಸಹಿ ಪಡೆದಿರುತ್ತಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಜಪ್ತಿ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 27-05-2022 ರಂದು ಪೋಲಿಸರು ಸದರಿ ವಾಹನಗಳನ್ನು ಜಪ್ತಿ ಮಾಡಿದ ಕಾರಣ ಜಪ್ತಿ ಪಂಚನಾಮೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SBH ವಕೀಲರಿಂದಃ</u>**

ಯಾವ ಕಾರಣಕ್ಕಾಗಿ ಜಪ್ತಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅಪಘಾತದ ಕಾರಣ ಜಪ್ತಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ಕರೆದು ಸಹಿ ಪಡೆದು ಭಾವಚಿತ್ರ ಪಡೆದಿದ್ದಾರೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**